ಕಡೆ. ನಾನು ಮಕ್ಕಳನ್ನು ಕರೆದುಕೊಂಡು ಬೇಗ ಬೇಗ ಹಳ್ಳಿಯಿಂದ ಹೊರಡಲು ಸಿದ್ಧತೆ ನಡೆಸಿದೆ.

ಅದು ಚೆನ್ನಾಗಿ ಸುಣ್ಣ ಬಣ್ಣ ಬಳಿದು ಅಚ್ಚುಕಟ್ಟಾಗಿದ್ದ ತಂದೂರಿ ಢಾಬಾ ಆಗಿತ್ತು ಹಾಗೂ ಅದರಲ್ಲಿ ಒಳಗಡೆಗೆ ತೆರೆದುಕೊಂಡ ಬಾಗಿಲಿತ್ತು. ಒಳಗಡೆ ಐದಾರು ಖಾಲಿ ಚೀಲಗಳನ್ನು ಹರಿದು ಪರದೆಯ ರೀತಿ ಮರೆಮಾಡಿದ್ದರು. ಅದರ ಹಿಂದೆ ಬಿದ್ದಿದ್ದ ಮೂರು ಹಗ್ಗದ ಮಂಚಗಳ ಕಾಲುಗಳು ಆ ತಂದೂರೀವಾಲಾನ ಹೆಂಡತಿ ಹಾಗೂ ಮಕ್ಕಳು ಅಲ್ಲೇ ವಾಸಿಸುತ್ತಿದ್ದಾರೆಂಬುದಕ್ಕೆ ಸಾಕ್ಷಿಯಾಗಿದ್ದವು. ಆ ಜಾಗ ಅಷ್ಟೊಂದು ಅಪಾಯಕಾರಿಯಲ್ಲವೆಂದು ನನಗನ್ನಿಸಿತು. ಅದು ಒಬ್ಬಳು ಹೆಂಗಸು ವಾಸಿಸುವ ಜಾಗವಾಗಿತ್ತು, ಅಂದರೆ ಗೌರವಯುತವಾದ ಜಾಗವಾಗಿತ್ತು.

ಹೆಂಗಸೊಬ್ಬಳು ಆ ತಾಟಿನ ಪರದೆಯನ್ನು ಸರಿಸಿ ಹೊರಗಡೆ ಇಣುಕಿ ನೋಡಿದಳು. ನಂತರ ಹೊರಗೆ ಬಂದು ನನ್ನ ಹತ್ತಿರ ನಿಂತುಕೊಂಡಳು.

'ಅಮ್ಮಾವರೇ, ನೀವು ನನ್ನನ್ನು ಗುರುತುಹಿಡಿಯಲಿಲ್ಲವೇನು?'

'ಇಲ್ಲವಲ್ಲ...' ಎಂದೆ. ಅವಳೊಬ್ಬ ಹಳ್ಳಿಯ ಸಾಧಾರಣ ಹೆಂಗಸು. ನಾನು ಅವಳ ಮುಖವನ್ನು ದಿಟ್ಟಿಸಿದೆ. ಆದರೆ ನನಗೆ ಯಾವ ವಿಷಯವೂ ನೆನಪಾದಂತೆನ್ನಿಸಲಿಲ್ಲ.

'ನಾನು ನಿಮ್ಮನ್ನು ನೋಡುತ್ತಲೇ ಗುರುತು ಹಿಡಿದೆ ಅಮ್ಮಾವರೇ! ಹೋದ ವರ್ಷ, ಅಲ್ಲಲ್ಲ... ಅದರ ಹೋದ ವರ್ಷ ನೀವು ಇಲ್ಲಿಗೆ ಬಂದಿದ್ದಿರಲ್ಲವೆ?'

'ಹೌದು, ಬಂದಿದ್ದೆ... ಆದರೆ...'

'ಆಗ ಎದುರಿನ ಮೈದಾನದಲ್ಲಿ ಒಂದು ಮದುವೆಯ ದಿಬ್ಬಣ ನೆರೆದಿತ್ತಲ್ಲವೆ?'

'ಹೌದು, ನನಗದು ನೆನಪಿದೆ.'

'ಆಗ ನೀವು ಪಲ್ಲಕ್ಕಿಯಲ್ಲಿ ಕುಳಿತಿದ್ದ ನನಗೆ ದುಡ್ಡು ಕೊಟ್ಟಿದ್ದಿರಿ...'

ಈಗ ನನಗೆ ನೆನಪಾಯಿತು. ಎರಡು ವರ್ಷದ ಹಿಂದೆ ನಾನು ಚಂಡೀಗಡಕ್ಕೆ ಬಂದಿದ್ದೆ. ಅಲ್ಲಿ ಹೊಸ ರೇಡಿಯೊ ಸ್ಟೇಷನ್ ಆರಂಭವಾಗಲಿತ್ತು. ಮೊದಲ ದಿನದ ಸಮ್ಮೇಳನಕ್ಕಾಗಿ ದೆಹಲಿಯ ಆಫೀಸಿನವರು ನನ್ನನ್ನು ಅಲ್ಲಿ ಒಂದು ಕವಿತೆಯನ್ನು ವಾಚಿಸಲು ಕಳುಹಿಸಿದ್ದರು. ಮೋಹನಸಿಂಹ ಹಾಗೂ ಓರ್ವ ಹಿಂದೀ ಕವಿ ಜಾಲಂಧರ್ ಸ್ಟೇಷನ್‌ನ ಕಡೆಯಿಂದ ಬಂದಿದ್ದರು. ಸಮ್ಮೇಳನ ಬೇಗನೇ ಮುಗಿದಿತ್ತು. ನಾವು ಮೂರುನಾಲ್ಕು ಜನ ಲೇಖಕರು ಕೌಸಲ್ಯಾ ನದಿಯನ್ನು ನೋಡುವ ಸಲುವಾಗಿ ಚಂಡೀಗಡದಿಂದ ಈ ಹಳ್ಳಿಗೆ ಬಂದಿದ್ದೆವು.

ನದಿ ಒಂದು ಒಂದೂವರೆ ಮೈಲಿ ಇಳಿಜಾರಿನಲ್ಲಿತ್ತು. ನಾವು ವಾಪಸಾಗುವಾಗ ಹತ್ತಿಬರುತ್ತಾ ಒಂದೊಂದು ಲೋಟ ಚಹಾಕ್ಕಾಗಿ ತಲ್ಲಣಿಸಿಹೋಗಿದ್ದೆವು. ಉಳಿದೆಲ್ಲ ಹೋಟೆಲುಗಳಿಗಿಂತ ಶುಭ್ರವಾದ ಹಾಗೂ ತೆರೆದ ಚಹಾದಂಗಡಿ ಇದಾಗಿತ್ತು. ನಾವು ಇಲ್ಲೇ ಒಂದೊಂದು ಲೋಟ ಬಿಸಿ ಬಿಸಿ ಚಹಾ ಕುಡಿದಿದ್ದೆವು. ಆ ದಿನ ಹೋಟೆಲಿನಲ್ಲಿ ಬೇಯುತ್ತಿದ್ದ ಮಾಂಸ ಹಾಗೂ ತಂದೂರಿ ರೋಟಿಗಳ ಜೊತೆ ಸಿಹಿಯೂ ಧಾರಾಳವಾಗಿ ಸಿದ್ಧಗೊಂಡಿತ್ತು. ತಂದೂರೀವಾಲಾ ಹೇಳುತ್ತಿದ್ದ, 'ಇಂದು ಈ ಮಾರ್ಗವಾಗಿ ನನ್ನ ಸೋದರಸೊಸೆಯ ದಿಬ್ಬಣ ಹೊರಡುತ್ತದೆ. ಅದಕ್ಕಾಗಿ ನಾನೂ ಏನಾದರೂ ಮಾಡಬೇಕಲ್ಲವೆ...'

ಆಮೇಲೆ ಸ್ವಲ್ಪ ಹೊತ್ತಿನಲ್ಲಿ ಎದುರಿನ ಮೈದಾನದಲ್ಲಿ ಪಲ್ಲಕ್ಕಿ ಇಳಿಯಿತು. ಪಲ್ಲಕ್ಕಿ ಹಿಂದಿನ ಹಳ್ಳಿಯಿಂದ ಬಂದಿತ್ತು. ಅದು ಮುಂದುವರಿಯಬೇಕಾಗಿತ್ತು. ದಾರಿಯಲ್ಲಿ ಆಕೆಯ ಮಾವ ದಿಬ್ಬಣವನ್ನು ಸ್ವಾಗತಿಸಿದ.

'ಈ ಮದುವೆ ಎನ್ನುವುದು ಎಂಥ ವಿಚಿತ್ರ ನೋಡು, ಮದುವೆಯಾಗುವಾಗ ಎಂಥ ರಂಗೇರುತ್ತದೆ, ಹಾಗೇ ಮುರಿದುಬಿದ್ದಾಗ...' ನಮ್ಮಲ್ಲೇ ಯಾರೋ ಒಬ್ಬರು ಹಾಗೆಂದರು.